## ‘ಗ್ರೀಟಿಂಗ್ಸ್’ಗೊಂದು ಕಳೆ!

ತೋಟ, ಗದ್ದೆಗಳ ಅಂಚಿನಲ್ಲಿ ನೈಸರ್ಗಿಕವಾಗಿ ಬೆಳೆವ ಕಳೆ ಸಸ್ಯಗಳನ್ನು ಬಳಸಿಕೊಂಡು ಅತ್ಯಾಕರ್ಷಕ ‘ಗ್ರೀಟಿಂಗ್ಸ್’ ಅಥವಾ ಶುಭಾಶಯ ಪತ್ರಗಳನ್ನು ಮಾಡಿ ಆನಂದಿಸಬಹುದು. ಪೇಟೆಯಲ್ಲಿ ಹಣಕೊಟ್ಟು ತರುವ ಪತ್ರಗಳಿಗಿಂತ ಇವು ಹೆಚ್ಚು ಸುಂದರವೂ, ನೈಸರ್ಗಿಕವೂ ಆಗಿದ್ದು, ಪಡೆದವರಿಗೂ ಖುಷಿ ನೀಡುವುದರಲ್ಲಿ ಸಂಶಯವಿಲ್ಲ. ಬಿಡುವಿನ ಸಮಯದಲ್ಲಿ ಒಂದು ಉಪವೃತ್ತಿಯಾಗಿಯೂ ಇದನ್ನು ಮಾಡುತ್ತ, ಸಮಯದ ಸದುಪಯೋಗ ಮಾಡಿಕೊಳ್ಳಬಹುದಾಗಿದೆ.

ಶಿರಸಿಯ ಲಿಂಗದಕೋಣದ ಸತೀಶ ಎಲೇಸರ ಅವರು ವಿವಿಧ ಬಗೆಯ ಕರಕುಶಲ ಕಲೆಗಳಲ್ಲಿ ಆಸಕ್ತಿ ಹೊಂದಿದ್ದಾರೆ.

**-ಅರ್ಚನಾ ಬೊಮ್ನಳ್ಳಿ, ಶಿರಸಿ**





## ಸಿಹಿ ಬದನೆ

ಇದು ಒಂದು ವಿಶಿಷ್ಟ ಬದನೆ ತಳಿ. ದಕ್ಷಿಣ ಕನ್ನಡದಲ್ಲಿ ಇದನ್ನು ಉಮಿ ಬದನೆ ಎನ್ನುವರು. ತಿನ್ನಲು ಸಿಹಿಯಾಗಿರುವುದರಿಂದ ಸಿಹಿ ಬದನೆ ಎಂಬ ಹೆಸರೂ ಬಂದಿದೆ. ಬಹಳ ಸಣ್ಣ ಗಾತ್ರದ್ದಾಗಿದ್ದು ಹೊರ ಮೈಯಲ್ಲಿ ರೋಮದಂತಹ ರಚನೆಯನ್ನು ಹೊಂದಿದೆ. ಇದನ್ನು ಬೇಯಿಸದೆ ಕಿವುಚಿ ತಿನ್ನಬಹುದು. ರಸವು ಬಹಳಷ್ಟು ಸಿಹಿಯಾಗಿರುತ್ತದೆ.

**- ಶಿವಪ್ರಸಾದ್ ರೈ**
**ಪೆರುವಾಜೆ, ಪುತ್ತೂರು**

## ವಿದ್ಯಾಸಂಸ್ಥೆಯಲ್ಲಿ ಸೌರ ವಿದ್ಯುತ್

ಕೆ.ಪಿ.ಟಿ.ಸಿ.ಎಲ್‌ನ ಸೋಲಾರ್‌ನೆಟ್ ಮೀಟರಿಂಗ್ ಸಿಸ್ಟಮ್ ಕುಂದಾಪುರ ತಾಲ್ಲೂಕಿನ ಕೋಟೇಶ್ವರದ ವಕ್ವಾಡಿ ಗುರುಕುಲ ವಿದ್ಯಾಸಂಸ್ಥೆಯಲ್ಲಿ ಸಾಕಾರಗೊಂಡಿದೆ. ರಾಜ್ಯದಲ್ಲಿಯೇ ಪ್ರಥಮ ಬಾರಿ ವಿದ್ಯಾಸಂಸ್ಥೆಯೊಂದರಲ್ಲಿ ಯೋಜನೆ ಆರಂಭಿಸಿದ ಹೆಗ್ಗಳಿಕೆ ಅದರದ್ದು. ನಗರ ಪ್ರದೇಶಗಳಿಗೆ ಸೀಮಿತವಾಗಿದ್ದ ಸೌರ ವಿದ್ಯುತ್ ಯೋಜನೆಯನ್ನು ಗ್ರಾಮೀಣ ಪ್ರದೇಶದಲ್ಲಿ ಮೊದಲ ಬಾರಿಗೆ ದೊಡ್ಡ ಮಟ್ಟದಲ್ಲಿ ಅಳವಡಿಸಿದ ಕೀರ್ತಿಗೆ ಭಾಜನವಾಗಿದೆ.

**- ಬಳಕೂರು ವಿ.ಎಸ್.ನಾಯಕ್,**
**ಬೆಂಗಳೂರು**

